**ಸಾಕ್ಷಿಯ ನ್ನು ದಿನಾಂಕ 17-03-2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಬಿ.ಕೆ. ವಕೀಲರಿಂದಃ</u>**

ನಾನು ಮೂಲತಃ ಚಿಂಚೋಳಿ ತಾಲೂಕು ನಾವದಗಿ ಗ್ರಾಮದವನು ಎಂದರೆ ಸಾಕ್ಷಿ ನಾನು ನಾವದಗಿ ಗ್ರಾಮದಲ್ಲಿ ಹುಟ್ಟಿದ್ದೆ ಆದರೆ ಬಟಗೇರಾ ಗ್ರಾಮದಲ್ಲಿ ವಾಸವಿದ್ದೇನೆ ಎನ್ನುತ್ತಾರೆ. ಬಟಗೇರಾ ಗ್ರಾಮದ ಗುಡಿಯ ಪೂಜಾರಿಯಾಗಿ ನಾನು ಸದರಿ ಊರಿಗೆ ಹೋಗಿದ್ದೆ ಎನ್ನುವುದು ಸರಿಯಲ್ಲ.

ಚಾಸಾ-1 ಕಾಮಾಕ್ಷಿ ನನ್ನ ಅಜ್ಜಿಯ ಅಕ್ಕನ ಮಗಳ ಮಗಳು. ಆಕೆ ನನ್ನ ಖಾಸಾ ತಂಗಿ ಅಲ್ಲ ಎನ್ನುವುದು ಸರಿ. ಈ ಪ್ರಕರಣದಲ್ಲಿ ಪೋಲೀಸರು ನನ್ನ ಹೇಳಿಕೆ ಪಡೆದಿಲ್ಲ. ನಾನು ಪೋಲೀಸರ ಮುಂದೆ ಕೊಟ್ಟ ಹೇಳಿಕೆಯಲ್ಲಿ 1 ನೇ ಆರೋಪಿಗೆ ಮದುವೆಯ ಸಂದರ್ಭದಲ್ಲಿ 6 ತೊಲೆ ಬಂಗಾರ ಮತ್ತು 2 ಲಕ್ಷ ಹಣ ಕೊಡಲಾಗಿತ್ತು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ಆ ರೀತಿ ಬರೆದಿರುವುದು ಸರಿ ಇದೆ ಎನ್ನುತ್ತಾರೆ.

ಈ ಪ್ರಕರಣದಲ್ಲಿ ನಡೆದಿದೆ ಎನ್ನಲಾದ ಘಟನೆಗಳನ್ನು ನಾನು ನೇರವಾಗಿ ನೋಡಿಲ್ಲ ಎಂದರೆ ಸರಿ. ಸಾಕ್ಷಿ ಸ್ವ-ಇಚ್ಛೆಯಿಂದ ಆಸ್ಪತ್ರೆಗೆ ಬಂದು ನೋಡಿದ ನಂತರ ನನಗೆ ಗೊತ್ತಾಗಿದೆ ಎನ್ನುತ್ತಾರೆ. ಚಾಸಾ-1 ಎಂ.ಎಸ್.ಸಿ. ಪದವೀಧರಳು ಎಂದರೆ ಸಾಕ್ಷಿ ನನಗೆ ಆಕೆಯ ವಿದ್ಯಾಭ್ಯಾಸದ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ.

ಚಾಸಾ-1 ರವರ ಮನೆಗೆ ನಾನು ರಾಜೀ ಪಂಚಾಯತಿ ಮಾಡಲು ನಮ್ಮ ಊರಿನಿಂದ ಒಬ್ಬನೇ ಹೋಗಿದ್ದೆ ಉಳಿದವರು ರಾಯಕೋಡನಿಂದ ಬಂದಿದ್ದರು. ಚಾಸಾ-1 ರವರಿಗೆ ಆಕೆಯ ಗಂಡ 1 ನೇ ಆರೋಪಿ ತನ್ನ ವೃದ್ಧ ತಾಯಿ 2 ನೇ ಆರೋಪಿಯನ್ನು ನೋಡಿಕೊಳ್ಳುವಂತೆ ಹೇಳುವಂತೆ ಆಕೆ ಹೆಚ್ಚಿಗೆ ಓದಿದ್ದು , 2 ನೇ ಆರೋಪಿಯನ್ನು ನೋಡಿಕೊಳ್ಳುವುದಿಲ್ಲ ಎಂದು ಹೇಳಿ ತಾನೇ ತನ್ನ ತವರು ಮನೆಗೆ ಹೋಗಿ ನಂತರ ಆರೋಪಿತರ ವಿರುದ್ಧ ಈ ಸುಳ್ಳು ಕೇಸು ಕೊಟ್ಟಿದ್ದಾಳೆ ಎಂದರೆ ಸಾಕ್ಷಿ ಚಾಸಾ-1 ರವರಿಗೆ ಆಸ್ಪತ್ರೆಯಲ್ಲಿ ಎಚ್ಚರವಾದ ನಂತರ ದೂರು ಕೊಟ್ಟಿದ್ದಾಳೆ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಚಿಂಚೋಳಿ**